ಪ್ರಧಾನ ಸಿ.ಜೆ. ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಮದ್ದೂರು
ದಿಃ31-07-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎಂ ವಕೀಲರವರಿಂದಃ

ನನ್ನ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿದ್ದೇನೆ. ವಾದಿಯು ದೊಡ್ಡಪ್ಪಚಾರಿಯವರ ಮಗಳು. ಸದರಿ ದೊಡ್ಡಪ್ಪಚಾರಿಯವರಿಗೆ 5-6 ಎಕರೆ ಜಮೀನು ಇತ್ತು. ಸದರಿಯವರಿಗೆ ಹುಲ್ಲು ಹಿತ್ತಲು, ಮನೆ ಇದೆ. ದೊಡ್ಡಪ್ಪಚಾರಿಗೆ ಇಬ್ಬರು ಹೆಣ್ಣುಮಕ್ಕಳು, ಇಬ್ಬರು ಗಂಡುಮಕ್ಕಳು. ಸದರಿದೊಡ್ಡಪ್ಪಚಾರಿ ತನ್ನ ಜೀವಿತಾವಧಿಯಲ್ಲಿ 4 ಜನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿದ್ದರು. ವಾದಿಯು ದೊಡ್ಡಪ್ಪಚಾರಿಯವರ ಸ್ವಂತ ಮಗಳು, ಸದರಿ ದೊಡ್ಡಪ್ಪಚಾರಿ ತಮ್ಮ ಜೀವಿತಾವಧಿಯಲ್ಲಿ ಮಾಡಿದ ವಿಭಾಗದ ಪಾಲುಪಟ್ಟಿ ನೋಡಿದ್ದೇನೆ. ಸದರಿ ಪಾಲುಪಟ್ಟಿಯಲ್ಲಿ ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ. ಸದರಿ ವಿಭಾಗವೂ 1983 ರಲ್ಲಿ ಆಗಿದೆ. ಸದರಿ ವೇಳೆಯಲ್ಲಿ ನನಗೆ ಸುಮಾರು 20 ವರ್ಷವಾಗಿತ್ತು. ನನ್ನ ಜನ್ಮ ದಿನಾಂಕ 1968. ನಾನು ಪಧವೀದರನಾಗಿದ್ದೇನೆ. 1983 ರ ಅವಧಿಗೆ ಸುಮಾರು 13 ವರ್ಷ ವಯಸ್ಸಾಗಿತ್ತು. ನಿಪಿ-4 ರ ಪಾಲುಪಟ್ಟಿಯಲ್ಲಿ ದೊಡ್ಡಪ್ಪಚಾರಿಯ ಎಲ್ಲಾ ಆಸ್ತಿಯನ್ನು ಬರೆಯಲಾಗಿದೆ. ವಾದಿಯವರಿಗೆ ಬಾರೆ ಗದ್ದೆ, ಗೋರಿ ಗದ್ದೆ, ಹುಲ್ಲು ಹಿತ್ತಲು ಮತ್ತು ಮನೆ ನೀಡಿರುತ್ತಾರೆ. ಮತ್ತೊಂದು ಪಂಚಾಯಿತಿಯನ್ನು ನಿಪಿ-4 ರಂತೆ ಖಾತೆ ಮಾಡಿಸಿಲ್ಲದ ಕಾರಣ ಪ್ರತಿವಾದಿ-1 ರವರು ಖಾತೆ ಮಾಡಿಸಿಕೊಳ್ಳಲು ಮಾಡಿರುತ್ತಾರೆ. ಮೊದಲ ಭಾರಿಗೆ ವಿಭಾಗವಾಗಿದ್ದನ್ನೇ ಎರಡನೇ ಭಾರಿ ಪಂಚಾಯಿತಿಯಲ್ಲೂ ವಿಭಾಗ ಮಾಡಿದ್ದು ಹುಲ್ಲು ಹಿತ್ತಲನ್ನು ವಾದಿಯವರಿಗೆ ನೀಡಿರುತ್ತೇವೆ ಸಾಕ್ಷಿ ಮುಂದುವರೆದು ಪ್ರತಿವಾದಿ-1 ರವರು ಅಕ್ರಮವಾಗಿ ಬೇರೆಯವರ ಹೆಸರಿಗೆ ಮಾರಾಟ ಮಾಡಿದ್ದರಿಂದ ಸದರಿ ಪಂಚಾಯಿತಿ ಮಾಡಲಾಗಿತ್ತು ಎನ್ನುತ್ತಾರೆ.

ಪ್ರತಿವಾದಿ-1 ರವರು ಹೊಂಬಾಳೇಗೌಡ ಎಂಬುವವರಿಗೆ 1998 ರಲ್ಲಿ ಮಾರಾಟ ಮಾಡಿದ್ದರು. ಹೊಂಬಾಳೇಗೌಡರವರಿಂದ ನೋಂದಾಯಿತ ಪತ್ರದ ಮೂಲಕ ಸದರಿ ಜಮೀನನ್ನು ವಾಪಸ್ ವಾದಿಯವರಿಗೆ ಬರೆಸಿಲ್ಲ ಸಾಕ್ಷಿ ಮುಂದುವರೆದು ಆದರೆ ಒಂದು ಪತ್ರವನ್ನು ಬರೆಸಿಕೊಳ್ಳಲಾಗಿದೆ ಎನ್ನುತ್ತಾರೆ. ಸದರಿ ಪತ್ರದ ಮೂಲಕ ಹೊಂಬಾಳೇಗೌಡರವರು ಜಮೀನನ್ನು ವಾಪಸ್ ವಾದಿಯವರಿಗೆ ಬರೆದುಕೊಟ್ಟಿರುತ್ತಾರೆ. ಪ್ರತಿವಾದಿ-1 ರವರು ಹೊಂಬಾಳೇಗೌಡರವರಿಗೆ 36 ಇಂಟು 53 ಅಡಿ ಸ್ವತ್ತನ್ನು ಮಾರಾಟ ಮಾಡಿದ್ದರು. ಸದರಿ ವೇಳೆಯಲ್ಲಿ ಪ್ರತಿವಾದಿ-1 ರವರ ಗಂಡ ಮರಣ ಹೊಂದಿದ್ದರು. ಖರೀದಿಸಿದಂದಿನಿಂದ ಹೊಂಬಾಳೇಗೌಡರವರೇ ಸದರಿ ಸ್ವತ್ತಿನ ಸ್ವಾಧೀನಾನುಭವ ಹೊಂದಿದ್ದಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಾದಿಯವರೇ ಇದ್ದಾರೆ ಎನ್ನುತ್ತಾರೆ. ಸದರಿ ವಾದಿಯವರ ಹೆಸರಿನಲ್ಲಿ ಮೇಲೆ ಹೇಳಿದ ಸ್ವತ್ತು ಇರುವ ಬಗ್ಗೆ ದಾಖಲಾತಿ ನೋಡಿಲ್ಲ, ಸಾಕ್ಷಿ ಮುಂದುವರೆದು ಸ್ವಾಧೀನದಲ್ಲಿರುವುದನ್ನು ನೋಡಿದ್ದೇನೆ ಎನ್ನುತ್ತಾರೆ. ಖರೀದಿಯಂತೆ ಹೊಂಬಾಳೇಗೌಡರವರ

ಹೆಸರಿನಲ್ಲಿ ಖಾತೆಯಾಗಿದೆ ಎಂದರೆ ಸರಿ. ಸದರಿ ಜಾಗದಲ್ಲಿ ಹೊಂಬಾಳೇಗೌಡರವರು ಹುಲ್ಲು ಹಿತ್ತಲು ಮತ್ತು ತಿಪ್ಪೆ ಹಾಕಿಕೊಂಡಿದ್ದಾರೆ ಎಂದರೆ ಸರಿಯಲ್ಲ. 2 ನೇ ಭಾರಿಗೆ ಪಂಚಾಯಿತಿ ಸೇರಿದ ಪತ್ರದಲ್ಲಿ ನಾನು ಸಹಿ ಮಾಡಿಲ್ಲ. ಸಾಕ್ಷಿ ಮುಂದುವರೆದು ನನ್ನ ಅಣ್ಣ ಮಾಡಿದ್ದಾರೆ ಎನ್ನುತ್ತಾರೆ. ನನ್ನ ಅಣ್ಣನ ಹೆಸರು ಆರ್ ಕೆ ರಮೇಶ್. ಸದರಿಯವರು ಜೀವಂತವಿದ್ದಾರೆ. ಈಶ್ವರಚಾರ್ ರವರ ತಂದೆ ದೊಡ್ಡಪ್ಪಚಾರ್ ರವರು ತಮ್ಮ ಜೀವಿತಾವಧಿಯಲ್ಲಿ ತನ್ನ ಇಬ್ಬರು ಗಂಡುಮಕ್ಕಳಿಗೆ ಭಾಗ ನೀಡಿದ್ದರು ಎಂದರೆ ಸರಿ. ದಾವಾಸ್ವತ್ತು ಸದರಿ ವಿಭಾಗದಲ್ಲಿ ಈಶ್ವರಚಾರ್ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ದೊಡ್ಡಪ್ಪಚಾರ್ ರವರು ತಮ್ಮ ಮಕ್ಕಳಿಗೆ ವಿಭಾಗ ಮಾಡಿಕೊಟ್ಟ ನಾನು ಅಪ್ರಾಪ್ತನಾಗಿದ್ದೆ ಎಂದರೆ ಸರಿ. ನಾನು ಅಪ್ರಾಪ್ತನಾಗಿದ್ದರಿಂದ ಸದರಿ ವಿಭಾಗದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆದರೆ ಓದಿದ್ದೇನೆ ಎನ್ನುತ್ತಾರೆ. ವಾದಿಯು ದಾವೆಯನ್ನು ವಿಭಾಗ ಕೋರಿ ಹಾಕಿರುತ್ತಾರೆ. ದಾವಾಸ್ವತ್ತಿಗೂ ವಾದಿಗೂ ಯಾವುದೇ ಸಂಬಂಧವಿರದೇ ಸದರಿ ಈಶ್ವರಚಾರ್ ರವರ ಮರಣಾಂತರ ಪ್ರತಿವಾದಿ-1 ಮತ್ತು 2 ರಿಂದ 5 ರವರು ಹೊಂಬಾಳೇಗೌಡರವರಿಗೆ ಮಾರಾಟ ಮಾಡಿದ್ದಾರೆಂದರೆ ಸರಿಯಲ್ಲ. 1998 ರಲ್ಲಿಯೇ ಹೊಂಬಾಳೇಗೌಡರವರಿಗೆ ಮಾರಾಟ ಮಾಡಿದ ವಿಚಾರ ವಾದಿಯವರಿಗೆ ಗೊತ್ತಿತ್ತು ಎಂದರೆ ಸರಿ. ನಾನು ದಾವಾಸ್ವತ್ತಿನ ಪಶ್ಚಿಮದ ಬಾಜುದಾರ. ನನ್ನ ಜಮೀನಿನ ಉತ್ತರಕ್ಕೆ ರಾಮಲಿಂಗೇಶ್ವರ ದೇವಸ್ಥಾನ ಮತ್ತು ವಾದಿಯವರು ಇರುವ ಜಮೀನು, ದಕ್ಷಿಣಕ್ಕೆ ಪುಟ್ಟಸ್ವಾಮಿರವರ ಜಮೀನು, ಪಶ್ಚಿಮಕ್ಕೆ ಭಾಗ್ಯಮ್ಮ ಮತ್ತು ಲೇಟ್ ರಾಮಕೃಷ್ಣರವರ ಜಮೀನು, ಪೂರ್ವಕ್ಕೆ ಬಾಲುರಾಮುರವರ ಜಮೀನು. ದಾವಾಸ್ವತ್ತಿನ ಚಕ್ಕುಬಂಧಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸಮುದಾಯ ಭವನ, ಉತ್ತರಕ್ಕೆ ರಾಮಲಿಂಗೇಶ್ವರ ದೇವಸ್ಥಾನದ ಅಂಗಳ, ದಕ್ಷಿಣಕ್ಕೆ ಬಾಲುರಾಮುರವರ ಜಮೀನು. ನಾನು ದಾವಾಸ್ವತ್ತನ್ನು ನೋಡಿಲ್ಲದಿದ್ದರೂ ಪ್ರತಿವಾದಿ-6 ರವರ ದ್ವೇಷ ಇರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು.